# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 314
ಮಾನ್ಯ ಸದಸ್ಯರ ಹೆಸರು : ಶ್ರೀ ಶಾಂತರಾಮ್ ಬುಡ್ನ ಸಿದ್ದಿ (ನಾಮ ನಿರ್ದೇಶನ ಹೊಂದಿದವರು)
ಉತ್ತರಿಸಬೇಕಾದ ದಿನಾಂಕ : 06-03-2025
ಉತ್ತರಿಸಬೇಕಾದವರು : ಮಾನ್ಯಮುಖ್ಯಮಂತ್ರಿಯವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಚಾಮರಾಜನಗರ ಜಿಲ್ಲೆಯಲ್ಲಿ ಅಸ್ತಿತ್ವದ ಅಳವಿನಂಚಿರುವ ಬುಡಕಟ್ಟು ಡೊಂಗ್ರಿ ಗರಾಸಿಯ ಜನಾಂಗದ ಒಟ್ಟು ಎಷ್ಟು ಕುಟುಂಬಗಳಿವೆ; ಇದರಲ್ಲಿ ಜಮೀನು ಮತ್ತು ಮನೆಗಳನ್ನು ಹೊಂದಿರುವ ಕುಟುಂಬಗಳೆಷ್ಟು; | ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಬುಡಕಟ್ಟು ಡೊಂಗ್ರಿ ಗರಾಸಿಯ ಜನಾಂಗದ ಒಟ್ಟು 67 ಕುಟುಂಬಗಳು ವಾಸವಿರುತ್ತವೆ. ಆ ಪೈಕಿ 37 ಕುಟುಂಬಗಳು ವಸತಿ ಸೌಲಭ್ಯ ಹೊಂದಿರುತ್ತಾರೆ. ಉಳಿದ 30 ಕುಟುಂಬಗಳಿಗೆ ವಸತಿ ಸೌಲಭ್ಯ ಇರುವುದಿಲ್ಲ. ಸದರಿ 67 ಕುಟುಂಬಗಳು ಜಮೀನು ಹೊಂದಿರುವುದಿಲ್ಲ. |
| ಆ) | ಗುಂಡ್ಲುಪೇಟೆ ನಗರದ ವಾರ್ಡ್ ನಂಬರ್-23 ರ ಬಿ.ಜೆ.ಆರ್ ಬಡಾವಣೆಯಲ್ಲಿ ಇರುವ 15 ಡೊಂಗ್ರಿ ಗರಾಸಿಯ ಕುಟುಂಬಗಳು ಸ್ವಂತ ಜಾಗ ಮತ್ತು ಮನೆಗಳಿಲ್ಲದೆ ಮೂಲಭೂತ ಸೌಕರ್ಯಗಳಿಂದ ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇವರುಗಳಿಗೆ ವಸತಿ ಮತ್ತು ಮೂಲ ಸೌಲಭ್ಯಗಳನ್ನು ಕಲ್ಪಿಸಲು ಸರ್ಕಾರ ಕ್ರಮವಹಿಸುವುದೆ? | ಬಂದಿದೆ.<br><br>ಗುಂಡ್ಲುಪೇಟೆ ತಾಲ್ಲೂಕಿನ ಪುರಸಭೆ ವ್ಯಾಪ್ತಿಯ ವಾರ್ಡ್ ನಂ.23 ರ ಬಿ.ಜೆ.ಆರ್ ಬಡಾವಣೆಯಲ್ಲಿ ವಾಸವಿರುವ 15 ಡೊಂಗ್ರಿ ಗರಾಸಿಯ ಕುಟುಂಬಗಳಿಗೆ ನಿವೇಶನ ಹಾಗೂ ಮನೆಗಳನ್ನು ನಿರ್ಮಾಣ ಮಾಡಿಕೊಡಲು ಹಾಗೂ ಕುಡಿಯುವ ನೀರು, ರಸ್ತೆ, ಚರಂಡಿ, ಇತ್ಯಾದಿ ಸೌಲಭ್ಯಗಳನ್ನು ಕಲ್ಪಿಸಲು ಮುಖ್ಯ ಅಧಿಕಾರಿಗಳು, ಪುರಸಭೆ, ಗುಂಡ್ಲುಪೇಟೆ ಇವರಿಗೆ ದಿನಾಂಕ:18-12-2024 ರಂದು ಪತ್ರ ಬರೆಯಲಾಗಿರುತ್ತದೆ.. |

**STW/SECB/STP/104/2025**

(ಸಿದ್ದರಾಮಯ್ಯ)
ಮುಖ್ಯಮಂತ್ರಿ